Dr Y.Nagappa: I had asked the amount released to the Zilla Parishats. There, there is no answer. They have released only 7.50 lakhs in respect of P.W.D., and Rs. 14.50 lakhs in respect of Irrigation. Irrigation has got its own reserved amount to spend. After the introduction of the Zilla Parishats, most of the rural areas are covered under the Zilla Parishats. They have not released a single naya paisa to the Zilla Parishats. There are no roads. Even the cattles cannot walk on the roads. How do you expect the human beings to walk on the roads?

ಶ್ರೀ ಎಂ. ರಾಜಶೇಖರ ಮೂರ್ತಿ:- ಈಗಾಗಲೇ ನಾನು ಉತ್ತರದಲ್ಲಿ ಕೊಟ್ಟಿದ್ದೇನೆ. ಪಿ.ಡಬ್ಲ್ಯು.ಡಿ.ಯಲ್ಲಿ ೩೦ ಹಾಗೂ ನೀರಾವರಿ ಇಲಾಖೆ ಅಡಿಯಲ್ಲಿ ೩೩.೭೫ ಲಕ್ಷ ಹೀಗೆ ಒಟ್ಟು ೬೩.೭೫ ಲಕ್ಷ ರೂಪಾಯಿ ಕೊಟ್ಟಿದೆ. ಮಾನ್ಯ ಸದಸ್ಯರು ಜಿಲ್ಲಾಪರಿಷತ್ತಿಗೆ ಹಣ ಬಿಡುಗಡೆ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಜಿಲ್ಲಾಪರಿಷತ್ತಿನವರು ಯಾವ ಯಾವ ರಸ್ತೆಗೆ ಹಣ ಬೇಕೆಂದು ಹೇಳುತ್ತಾರೋ, ಬೇಡಿಕೆ ಬಂದಾಗ, ಮುಂದಿನ ಸಾರಿ ಹಣ ಬಿಡುಗಡೆ ಮಾಡುವಾಗ ಅದನ್ನು ಗಮನದಲ್ಲಿಟ್ಟು ಕೊಂಡು ಅದಕ್ಕೂ ರಿಲೀಸ್ ಮಾಡುತ್ತೇವೆ.

(ಗೊಂದಲ)

೧೧.೦೦ ಎ.ಎಂ.

ಅಧ್ಯಕ್ಷರು:- ಮಾನ್ಯ ಸದಸ್ಯರು ಬೇಕಾದರೆ ಮಿನಿಸ್ಟರ್ ಛೇಂಬರ್‌ಗೆ ಹೋಗಿ ಅವರನ್ನು ಭೇಟಿ ಮಾಡಿ ಚರ್ಚೆ ಮಾಡಿ ಮುಂದಿನ ಪ್ರಶ್ನೆ ಬಾಬುರಾವ್ ಚವಾಣ್.

ವಿಷಯ:- ಶಹಾಬಾದ್ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊರತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೮:- (೬೪೦)
ಶ್ರೀ ಬಾಬುರಾವ್ ಚವಾಣ್ (ಶಹಾಬಾದ್)
ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ?

ಅ) ಶಹಾಬಾದ್, ಮತ ಕ್ಷೇತ್ರದಲ್ಲಿ ಬರುವ ಕೆಲವು ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆಗಳಿವೆಯೇ ಹಾಗೂ ಅವುಗಳು ಯಾವವು?
ಆ) ಸರಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು)

ಶಹಬಾದ್ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವವನ್ನು ಸದ್ಯಕ್ಕೆ ಎದುರಿಸುತ್ತಿರುವ ೮ ಹಳ್ಳಿಗಳಿದ್ದು ಅವುಗಳು ಈ ಕೆಳ ಕಂಡಂತವೆ:-

೧) ಕಡಹಳ್ಳಿ
೨) ಚುಮ್ಮನೂರು
೩) ಕಡಸೂರು
೪) ಕೊಂಚೂರು
೫) ಸೋಮನಾಥಹಳ್ಳಿ

೬) ಹುಲೆಂದಗೇರ
೭) ಕೊಲ್ಲೂರು
೮) ಬನಹಟ್ಟಿ

ಕುಡಿಯುವ ನೀರಿನ ಅಭಾವವಿರುವ ೮ ಹಳ್ಳಿಗಳ ಪೈಕಿ ೬೬ ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆಯನ್ನು ಹೋಗಲಾಡಿಸುವಲ್ಲಿ ೯೨-೯೩ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಮತ್ತು ಮಿನಿಮಿಷನ್ ಕುಡಿಯುವ ನೀರು ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳಲಾಗಿದೆ. ಉಳಿದೆರಡು ಗ್ರಾಮಗಳಲ್ಲಿ ಅಂದರೆ ಕೊಂಚೂರು ಮತ್ತು ಕೊಲ್ಲೂರು ಗ್ರಾಮಗಳಲ್ಲಿ ಹಾಲಿ ಇರುವ ನೀರು ಸರಬರಾಜನ್ನು ಉತ್ತಮಗೊಳಿಸಬೇಕಾಗಬಹುದು. ಈ ಕೆಲಸವನ್ನು ಅಭಾವ ಪರಿಹಾರಯೋಜನೆಯಡಿಯಲ್ಲಿ, ತೆಗೆದುಕೊಳ್ಳಲು ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರನ್ನು ಕೇಳಿಕೊಳ್ಳಲಾಗಿದೆ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳಿಗೆ ಕೇಳತಕ್ಕದ್ದು ಇಷ್ಟೆ, ಶಹಬಾದ್ ಮತ ಕ್ಷೇತ್ರದಲ್ಲಿ ಬರುವಂತಹ ಯಾವ್ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂದರೆ ೮ ಹಳ್ಳಿಗಳ ಹೆಸರು ಕೊಟ್ಟಿದ್ದಾರೆ. ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ೧೯೯೨-೯೩ನೇ ಸಾಲಿನ ಅಂದಾಜಿನಲ್ಲಿ ಕೆಲವು ಗ್ರಾಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಕೊಂಚೂರು ಮತ್ತು ಕೊಲ್ಲೂರು ನೀರು ಸರಬರಾಜು ಉತ್ತಮ ಪಡಿಸಿದ್ದೇವೆಂದು ಹೇಳಿದ್ದಾರೆ. ಮೂರನೆಯದು ಅಂದರೆ, ಈ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಅಭಾವ ಪರಿಹಾರ ಯೋಜನೆಯಲ್ಲಿ ಹಣ ಕೊಟ್ಟಿದ್ದೇವೆ, ಅವರು ಕೂಡ ವ್ಯವಸ್ಥೆ ಮಾಡುತ್ತಾರೆನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ನಾನು ಸತತವಾಗಿ ಜಿಲ್ಲಾಧಿಕಾರಿಗಳಿಗೆ ಬಹಳಷ್ಟು ಸಾರಿ ದೂರು ಕೊಟ್ಟಿದ್ದೇನೆ. ಇಂತಹ ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ, ಅಲ್ಲಿನ ಜನರು ಐದು ಕಿಲೋಮೀಟರ್ ದೂರದಿಂದ ನೀರು ತರುತ್ತಾರೆ, ಆಮೇಲೆ ಗುಲ್ಬರ್ಗ ಜಿಲ್ಲೆಯಲ್ಲಿ ಬಿಸಿಲಿನ ತಾಪ ಇದೆ, ಅಲ್ಲೂ ಐದು ಕಿಲೋಮೀಟರ್ ದೂರದಿಂದ ನೀರು ತರುತ್ತಾರೆ. ಈ ಹಳ್ಳಿಗಳಲ್ಲಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬೇಗ ಪರಿಹಾರ ಮಾಡಿಕೊಡಿಯೆಂದು ನಾನು ಹೇಳಿರುವುದನ್ನು ಇಲ್ಲಿಯವರೆಗೆ ನಿರ್ಲಕ್ಷ್ಯಭಾವನೆಯಿಂದ ತೆಗೆದುಕೊಂಡಿದ್ದಾರೆ. ಇಲ್ಲಿ ಯಾವುದೇ ಕೆಲಸವಾಗಿಲ್ಲ. ಆದ್ದರಿಂದ ನಾನು ಕಳಕಳಿಯಿಂದ ಒತ್ತಾಯಪೂರ್ವಕವಾಗಿ ನಾನು ಮಂತ್ರಿಗಳನ್ನು ಕೇಳಿ ಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ ನೀವು ಹತ್ತು ದಿವಸಗಳಲ್ಲಿ ನೀರು ಕೊಡಿಸುತ್ತೇವೆ, ೧೫ ದಿವಸಗಳಲ್ಲಿ ನೀರು ಕೊಡಿಸುತ್ತೇವೆಂದು ನಿಖರವಾಗಿ ಹೇಳಬೇಕು. ಬಜೆಟ್‌ನಲ್ಲಿ ಹಾಕಿದ್ದೇವೆ, ಮಾಡಿದ್ದೇವೆ ಎಂದರೆ ಅದು ಆಗಲಾರದ ಕೆಲಸ. ಆ ಜನರು ನೀರು ಕುಡಿಯವುದಕ್ಕಾಗುವುದಿಲ್ಲ. ಏಕೆಂದರೆ, ಎರಡು-ಮೂರು ವರ್ಷಗಳಿಂದ ಈ ಹಳ್ಳಿಗಳಿಗೆ ನೀರು ಸಿಕ್ಕಿಲ್ಲ. ಆದ್ದರಿಂದ ನಾನು ಸ್ಪಷ್ಟವಾಗಿ ಕೇಳುತ್ತೇನೆ, ಒಂದು ತಿಂಗಳಿನಲ್ಲಿ ಅಥವಾ ೧೫ ದಿವಸಗಳಲ್ಲಿ ನೀರು ಕೊಡಿಸುತ್ತೇವೆನ್ನುವ ಒಂದು ಸ್ಪಷ್ಟವಾದ ಡೇಟನ್ನು ಕೊಡಿ. ನೀರನ್ನು ಕೊಡಿಸೇ ತೀರುತ್ತೇವೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಅಭಾವ ಪರಿಹಾರ ಯೋಜನೆ ಅಡಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಹಣ ಕೊಟ್ಟಿದ್ದೇವೆಂದು ಹೇಳಿದರೆ ಜಿಲ್ಲಾಧಿಕಾರಿಯವರು ನಮಗೆ ನೇರವಾಗಿ ಹಣ ಕೊಡುವುದಿಲ್ಲ.

ಅಧ್ಯಕ್ಷರು:- ಮಾನ್ಯ ಸದಸ್ಯರು ಸರಿಯಾಗಿ ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ವೈ. ಘೋರ್ಪಡೆ:- ಶಹಬಾದ್ ಅಸೆಂಬ್ಲಿ ಮತದಾರ ಕ್ಷೇತ್ರದಲ್ಲಿ ೮ ಹಳ್ಳಿಗಳಲ್ಲಿ ಈ ತೊಂದರೆ ಇದೆಯೆಂದು ನಾವು ಒಪ್ಪಿಕೊಂಡಿದ್ದೇವೆ. ಇದರಲ್ಲಿ ಆರು ಹಳ್ಳಿಗಳಿಗೆ ಈಗಾಗಲೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಾಧ್ಯವಾದಮಟ್ಟಿಗೆ ಮಾಡಿದ್ದೇವೆ. ಇನ್ನು ಎರಡು ಹಳ್ಳಿಗಳಲ್ಲಿ ವಾಟರ್ ಸ್ಕೇರ್‌ಸಿಟಿ ಸ್ವಲ್ಪ ಜಾಸ್ತಿಯಾಗಿರುವುದರಿಂದ ಅದನ್ನು ಆಗ್ಮೆಂಟೇಶನ್

ಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಇದನ್ನು ಶೀಘ್ರದಲ್ಲಿ ಮಾಡಿಸುವ ಉದ್ದೇಶದಿಂದ ಜಿಲ್ಲಾದಿಕಾರಿಯವರಿಗೆ ನಾವು ನೇರವಾಗಿ ಆದೇಶ ಕೊಟ್ಟಿದ್ದೇವೆ. ತಕ್ಷಣ ಅಲ್ಲಿಗೆ ಹೋಗಿ ಸ್ಕೆರ್‌ಸಿಟಿ ರಿಲೀಫ್ ಪ್ರೋಗ್ರಾಮ್‌ನಲ್ಲಿ ಅಗ್ಮೆಂಟೇಶನ್ ಕೆಲಸ ನಡೆಯಬೇಕೆಂದು ಹೇಳಿದ್ದೇವೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಒಂದು ಮಾತು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕರ್ನಾಟಕದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಈರೀತಿ ವಾಟರ್ ಸ್ಕೇರ್‌ಸಿಟಿ ಇದೆ. ಅಲ್ಲಿ ಬೇರೆ ಕಡೆಯಿಂದ ನೀರು ತರುವಂತಹ ಒಂದು ಪರಿಸ್ಥಿತಿ ಇದೆ, ಅದನ್ನು ಗುರುತುಮಾಡಿ ಮುಂಬರುವ ಎರಡು ವರ್ಷದಲ್ಲಿ ಸಂಪೂರ್ಣವಾಗಿ ಅವರ ಕಷ್ಟವನ್ನು ಪರಿಹಾರ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ. That is identifying the problem villages wherever water has to be brought from a distance. ಆ ಕೆಲಸ ನಡೆಯಬೇಕೆಂದು ಮಾಡುತ್ತಿದ್ದಾರೆ. ಆ ಕೆಲಸವನ್ನು ಪೂರ್ಕೆಸಿದರೆ ಕರ್ನಾಟಕ ರಾಜ್ಯದಲ್ಲಿ ಪ್ರಾಬ್ಲಮ್ ವಿಲೇಜಸ್ ಇಲ್ಲವೆಂದು ನಾವು ಧೈರ್ಯವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆ ಕೆಲಸವನ್ನು ನಾವು ಪ್ರಾರಂಭ ಮಾಡಿದ್ದೇವೆ, ಈ ವರ್ಷದಲ್ಲಿ ಪೂರ್ಕೆಸುತ್ತೇವೆ.

ಶ್ರೀ ಬಾಬುರಾವ್ ಚವಾಣ್:- ನೀರು ಪೂರ್ಕೆಕೆ ಮಾಡುತ್ತೇವೆ, ಕೊಡುತ್ತೇವೆನ್ನುವ ಮಾತನ್ನು ಮಾನ್ಯಮಂತ್ರಿಗಳು ಹೇಳುತ್ತಾರೆ, ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ ಸ್ಪೆಸಿಫಿಕ್ ಆಗಿ ಒಂದು ತಿಂಗಳಿನಲ್ಲಿ ಮಾಡುತ್ತೀರಾ? ಏಕೆಂದರೆ ಗುಲ್ಬರ್ಗ ಜಿಲ್ಲೆಯಲ್ಲಿ ಬಿಸಿಲಿನ ತಾಪದಿಂದ ಕುಡಿಯುವ ನೀರಿನ ಅಭಾವದಿಂದ ಜನರು ಚಡಪಡಿಸುತ್ತಿದ್ದಾರೆ. ನನಗೆ ಹೇಳುವುದಕ್ಕೆ ನಾಚಿಕೆ ಬರುತ್ತದೆ. ನಾವು ಶಾಸಕರಾಗಿ ಯಾವ ಹಳ್ಳಿಗೆ ಹೋದರೂ ನಮ್ಮನ್ನು ಹಿಡಿದುಕೊಂಡು ಬಿಡುತ್ತಾರೆ. ಏನು ಸ್ವಾಮಿ ನಮಗೆ ಕುಡಿಯಲಿಕ್ಕೆ ನೀರಿಲ್ಲ, ನಾವು ಬಹಳ ಕಷ್ಟಪಡುತ್ತಿದ್ದೇವೆಂದು ಹೇಳುತ್ತಾರೆ. ಆದ್ದರಿಂದ ನಾನು ಬಹಳ ದುಃಖದಿಂದ ಈ ವಿಷಯವನ್ನು ವ್ಯಕ್ತಪಡಿಸುತ್ತಿದ್ದೇನೆ. ನಾನು ಮಾನ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ತಾವು ಜಿಲ್ಲಾಧಿಕಾರಿಗಳಿಗೆ ಹೇಳುತ್ತಾ ಇದ್ದೀರಿ. ನಾನು ಜಿಲ್ಲಾಧಿಕಾರಿಗಳ ಬಗ್ಗೆ ನೇರವಾಗಿ ದೂರುಮಾಡುತ್ತಿದ್ದೇನೆ. ಜಿಲ್ಲಾಧಿಕಾರಿಗಳು ಶಾಸಕರ ಮುಖನೋಡಿ ರಾಜಕೀಯ ಮಾಡಿ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ನಿಜವಾಗಿಯೂ ಯಾವ ಶಾಸಕರಿಗೆ ತೊಂದರೆಯಿದೆ ಅವರಿಗೆ ಹಣವನ್ನು ಕೊಡುತ್ತಿಲ್ಲ. ಅವರು ಮಲತಾಯಿಧೋರಣೆ ಮಾಡುತ್ತಿದ್ದಾರೆ. ಕೆಲವು ಶಾಸಕರಿಗೆ ಜಾಸ್ತಿಕೊಟ್ಟಿದ್ದಾರೆ, ಕೆಲವು ಶಾಸಕರಿಗೆ ಕಡಿಮೆ ಕೊಟ್ಟಿದ್ದಾರೆ. ಏಕೆ ಈ ತರಹ ಜಿಲ್ಲಾಧಿಕಾರಿಗಳು ರಾಜಕೀಯ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ. ಏಕೆಂದರೆ ಸ್ಕೇರ್ಸಿಟಿ ರಿಲೀಫ್ ಫಂಡ್‌ನಲ್ಲಿ ಒಬ್ಬ ಶಾಸಕರಿಗೆ ಜಾಸ್ತಿ, ಮತ್ತೊಬ್ಬರಿಗೆ ಕಡಿಮೆ ಅಂದರೆ ಒಬ್ಬರಿಗೆ ಜಾಸ್ತಿ ಕೆಲಸ ಮತ್ತೊಬ್ಬರಿಗೆ ಕಡಿಮೆ ಕೆಲಸ ಕೊಡುತ್ತಾರೆ. ಈ ತಾರತಮ್ಯ ಏತಕ್ಕೆ ಎಂದು ಹೇಳಬೇಕು. ಈ ಬಗ್ಗೆ ಸ್ಪೆಸಿಫಿಕ್ ಆಗಿ ಹೇಳಿ. ಬೇಸಿಗೆಯಲ್ಲಿ ನೀರು ಕೊಡುವ ವ್ಯವಸ್ಥೆ ಮಾಡಿ. ಬೇಸಿಗೆಯ ನಂತರ ನಾವು ನೀರು ಕೇಳುವುದಿಲ್ಲ. ೧೫-೨೦ ದಿನಗಳಲ್ಲಿ ವ್ಯವಸ್ಥೆ ಮಾಡಿಕೊಡುತ್ತೀರಾ ಇಲ್ಲವೆ? ಮುಂದೆ ಕೊಡುವುದು ಬಿಡುವುದು ನಮ್ಮ ಪಾಲಿಗೆ ಬಿಟ್ಟಿದ್ದು. ಆದರೆ ಬೇಸಿಗೆಯ ಬವಣೆಯನ್ನು ನೀಗಬೇಕು. ನಾನು ಸಲಹೆ ಮಾಡುತ್ತಿದ್ದೇನೆ. ಎನ್‌ಆರ್‌ಡಬ್ಲುಎಸ್. ಸ್ಕೀಮನ್ನು ಅಳವಡಿಸಿ ಒಂದೊಂದು ಹಳ್ಳಿಗೆ ಒಂದೊಂದು ಲಕ್ಷ ರೂಪಾಯಿವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಆ ಕೆಲಸ ೧೫ ದಿನಗಳಲ್ಲಿ ಆಗಬೇಕು.

ಶ್ರೀ ಎಂ.ವೈ. ಘೋರ್ಪಡೆ:- ನನ್ನ ಕಡೆ ಪ್ರತಿಯೊಂದು ಹಳ್ಳಿಯಲ್ಲಿ ಏನೇನು ಕೆಲಸ ನಡೆಯುತ್ತಿದೆ, ನಡೆದಿದೆ ಎಂಬ ವಿವರ ಇದೆ. ಅದನ್ನು ಕೇಳುವುದಕ್ಕೆ ಇಷ್ಟಪಟ್ಟರೆ ನಾನು ಹೇಳುತ್ತೇನೆ. ಈ ಎರಡು ಹಳ್ಳಿಗಳಿಗೆ ಸಂಬಂಧಪಟ್ಟ ಹಾಗೆ ಡಿ.ಸಿ. ಯವರಿಗೆ ನೇರವಾಗಿ ಹೇಳಿದ್ದೇವೆ. ತಕ್ಷಣ ಏನು ಸಾಧ್ಯವೋ ಅದನ್ನು ಮಾಡುತ್ತಾರೆ. ಎಷ್ಟೋ ಕಡೆ ನೀರು ಸಿಗುವುದಿಲ್ಲ, ಆ ಪ್ರಶ್ನೆ, ಕೂಡ ಇದೆ. ನೀರು ಸಿಕ್ಕರೆ ನೀರು ಕೊಡಿಸುವ ಪ್ರಯತ್ನ ಮಾಡುತ್ತೇವೆ.

ಇದು ಬರೀ ಅವರ ಹಳ್ಳಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ, ಕೆಲವು ಕಡೆಗಳಲ್ಲಿ ಬೇರೆ ಕಡೆಯಿಂದ ನೀರು ತರಬೇಕಾಗುತ್ತದೆ, ಅದರ ಕಡೆ ನೇರವಾಗಿ ಲಕ್ಷ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದಕಾರಣ ಮಿನಿ ವಾಟರ್ ಸಪ್ಲೈ ಮಾಡುವುದಕ್ಕೆ ಸ್ವಲ್ಪ ತಡವಾದರೂ ನೇರವಾಗಿ ಅವರ ಕಷ್ಟ ನಿವಾರಣೆ ಮಾಡಲಿಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರಿಗೆ ಯಾವ ಅನುಮಾನ ಇರಬೇಕಾಗಿಲ್ಲ.

ಶ್ರೀ ಬಾಬುರಾವ್ ಚವಾಣ್:- ಬೇಸಿಗೆ ಹೋದನಂತರ ಉಪಯೋಗವಾಗುವುದಿಲ್ಲ. ಬೇಸಿಗೆಯಲ್ಲಿ ಮಾಡಿದರೆ ಉಪಯೋಗವಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ:- ನನ್ನ ಕ್ಷೇತ್ರದ ೪-೫ ಹಳ್ಳಿಗಳಲ್ಲಿ ಬೇಸಿಗೆ ಬಂದಾಗ ಈ ರೀತಿ ತೊಂದರೆ ಅನುಭವಿಸುತ್ತಿದ್ದೇವೆ. ನನ್ನ ಸ್ವಂತ ಕ್ಷೇತ್ರದಲ್ಲಿ ಏನು ಮಾಡುತ್ತಿದ್ದೇನೆ ಅಷ್ಟೇ ಕಾಳಜಿ ವಹಿಸಿ ಅವರ ಕ್ಷೇತ್ರದಲ್ಲೂ ಮಾಡೋಣ.

ವಿಷಯ:- ಗುತ್ತಿಗೆ ಆಧಾರದ ಮೇಲೆ ಭೂಮಾಪಕರ ನೇಮಕಾತಿ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೪೯:- (೬೪೫)
ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್)
ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗುತ್ತಿಗೆ ಆಧಾರದ ಮೇಲೆ ಭೂಮಾಪಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಇತ್ತೀಚೆಗೆ ಸಂದರ್ಶನ ನಡೆಸಿರುವುದು ನಿಜವಲ್ಲವೇ?
ಆ) ಹಾಗಿದ್ದಲ್ಲಿ ಸಂದರ್ಶನ ನಡೆಸಿ ಹಲವಾರು ದಿನಗಳಾದರೂ ಸಹ ನೇಮಕಾತಿ ಆದೇಶಗಳನ್ನು ಕಳುಹಿಸದಿರುವುದು ನಿಜವೇ?
ಇ) ಅಭ್ಯರ್ಥಿಯ ಆಯ್ಕೆಯ ಪಟ್ಟಿ ಸಿದ್ಧವಾಗಿದೆಯೇ (ಆಯ್ಕೆಯಾದ ಅಭ್ಯರ್ಥಿಯ ವಿವರಗಳನ್ನು ಜಿಲ್ಲಾವಾರು ನೀಡುವುದು)
ಈ) ಆಯ್ಕೆಯಾದವರಿಗೆ ಯಾವಾಗ ನೇಮಕಾತಿ ಆದೇಶಗಳನ್ನು ಕಳುಹಿಸಲಾಗುವುದು?

ಶ್ರೀ ಎಂ. ರಾಜಶೇಖರ ಮೂರ್ತಿ
(ಕಂದಾಯ ಸಚಿವರು)

ಹೌದು
ನಿಜ
ಹೌದು.

ಈ ವಿಷಯದ ಬಗ್ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ವಿವರಗಳನ್ನು ಈಗ ಒದಗಿಸಿಲ್ಲ.

ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಉಚ್ಚ-ನ್ಯಾಯಲಯದಲ್ಲಿ ದಾವೆ ಅರ್ಜಿಗಳನ್ನು ಇತ್ಯರ್ಥಪಡಿಸಿದ ನಂತರ ಪರಿಶೀಲಿಸಲಾಗುವುದು ಹಾಗೂ ಇತರ ಸಾಧ್ಯತೆಗಳನ್ನು ಸಹಾ ಪರಿಶೀಲಿಸಲಾಗುವುದು.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ:- ಭೂಮಾಪಕರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೀರಾ ಎಂದರೆ 'ಹೌದು' ಎಂದು ಹೇಳಿದ್ದಾರೆ. ಅವರಿಗೆ ಸಂದರ್ಶನಕ್ಕೆ ಕರೆದಿದ್ದೀರಾ ಎಂದರೆ 'ಹೌದು' ಎಂದು ಹೇಳಿದ್ದಾರೆ. ಆರ್ಡರ್ ಏತಕ್ಕೆಕೊಡಲಿಲ್ಲವೆಂದರೆ ಕೇಸು ನ್ಯಾಯಾಲಯದಲ್ಲಿ ಇದೆ ಎಂದು ಹೇಳಿದ್ದಾರೆ. ನಾನು ಏನು ಪಟ್ಟಿ ಕೇಳಿದ್ದೆ ಅದನ್ನು